ಹಳೆ ಮಾದರಿಯ ತಕ್ಕಡಿಗಳ ಬಳಕೆ

4485 - ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಹಾಲಿ ಇರುವ ಹಳೆ ಮಾದರಿ ತಕ್ಕಡಿಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಇವುಗಳಿಂದ ತೂಕ ಮತ್ತು ಅಳತೆಯಲ್ಲಿ ಸಾರ್ವಜನಿಕರಿಗೆ ನಡೆಯುತ್ತಿರುವ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಇದರ ಬದಲು ನೂತನ ಎಲೆಕ್ಟ್ರಾನಿಕ್ ತೂಕ ಮತ್ತು ಅಳತೆ ಸಾಧನಗಳನ್ನು ಅಳವಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ತಕ್ಕಡಿಗಳನ್ನು ಬಳಸುತ್ತಿಲ್ಲ.

ಆ) ಇಲ್ಲ. ಆದರೂ ಸಹ ಕಾನೂನು ಮಾಪನಶಾಸ್ತ್ರ ಇಲಾಖೆಯು ಕಾನೂನು ಬದ್ಧವಾದ ನಿಖರವಾದ ತಕ್ಕಡಿ ಮತ್ತು ತೂಕಗಳನ್ನು (ವಿದ್ಯುನ್ಮಾನ ತೂಕಗಳೂ ಸೇರಿದಂತೆ) ಉಪಯೋಗಿಸುವಂತೆ ಮಾಡಲು ಪ್ರಯತ್ನಿಸುತ್ತಿದೆ.

ಇ) ಹಳೆಯ ಮಾದರಿಯ ತಕ್ಕಡಿ ಮತ್ತು ನೂತನ ಎಲೆಕ್ಟ್ರಾನಿಕ್ ತೂಕ ಮತ್ತು ಅಳತೆ ಸಾಧನಗಳ ನಿಖರತೆ ಬಗ್ಗೆ ಕಾನೂನು ಮಾಪನಶಾಸ್ತ್ರ ಇಲಾಖೆಯ ಕ್ಷೇತ್ರಾಧಿಕಾರಿಗಳು ಪ್ರತಿ ವರ್ಷವೂ ಸತ್ಯಾಪನೆ ಮಾಡಿ ಮುದ್ರೆ ಹಾಕುತ್ತಿರುತ್ತಾರೆ. ಈ ಎರಡು ಮಾದರಿಯ ಸಾಧನಗಳ ನಿಖರತೆಯನ್ನು ಪರೀಕ್ಷಿಸಲು ಒಂದೇ ವರ್ಕಿಂಗ್ ಸ್ಟ್ಯಾಂಡರ್ಡ್ ತೂಕವನ್ನು ಬಳಸುವುದರಿಂದ ನಿಖರತೆಗಳು ಪ್ರಮಾಣಬದ್ಧವಾಗಿದ್ದು ನಿಖರತೆಯಲ್ಲಿ ವ್ಯತ್ಯಾಸ ಆಗುವ ಸಾಧ್ಯತೆ ಇರುವುದಿಲ್ಲ ಎಲೆಕ್ಟ್ರಾನಿಕ್ ತೂಕದ ಯಂತ್ರಗಳು ಉಪಯೋಗಿಸಲು ಸುಲಭವಾಗಿದ್ದು, ಈಗಾಗಲೇ ಬಹಳಷ್ಟು ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳಲ್ಲಿ ಬಳಸಲಾಗುತ್ತಿದೆ. ಹಳೆಯ ಮಾದರಿ ತಕ್ಕಡಿಗಳ ಬೆಲೆಗಳ ಹೋಲಿಕೆಯಲ್ಲಿ ಎಲೆಕ್ಟ್ರಾನಿಕ್ ಸಾಧನಗಳು ಬಹಳ ದುಬಾರಿಯಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿನ ಸಣ್ಣ ಪುಟ್ಟ ಅಂಗಡಿ ಮುಂಗಟ್ಟಿನಲ್ಲಿ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸುವುದು ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಆರ್ಥಿಕವಾಗಿ ಸಾಧ್ಯವಾಗಲಾರದು. ಆದರೂ ನಿಖರವಾದ ತಕ್ಕಡಿಗಳನ್ನು ಉಪಯೋಗಿಸುವಂತೆ ಮಾಡಲು ಕಾನೂನು ಮಾಪನಶಾಸ್ತ್ರ ಇಲಾಖೆ ಪ್ರಯತ್ನಿಸುತ್ತಿದೆ.

ಭದ್ರಾವತಿ ತಾಲ್ಲೂಕಿನಲ್ಲಿರುವ ಕೆರೆಗಳು

4486 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾವತಿ ತಾಲ್ಲೂಕಿನ ದೊಡ್ಡ ನೀರಾವರಿ ಕೆರೆಗಳ 'ಸಿಲ್ಟ್' ತೆಗೆಯಲು ತೆಗೆದುಕೊಂಡ ಕ್ರಮಗಳು ಯಾವುವು?*

ಅ) ಭದ್ರಾವತಿ ತಾಲ್ಲೂಕಿನಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಮತ್ತು ಆ) ಭದ್ರಾವತಿ ತಾಲ್ಲೂಕಿನಲ್ಲಿ ಈ ಕೆಳಕಂಡಂತೆ ನಾಲ್ಕು ಸಣ್ಣ ನೀರಾವರಿ ಕೆರೆಗಳಿರುತ್ತವೆ.

1. ರಂಗೋಲಿಹಳ್ಳ ಕೆರೆ
2. ದಾನವಾಡಿ ದ್ಯಾಮಣ್ಣನ ಕೆರೆ
3. ಸೈದರಕಲ್ಲಹಳ್ಳಿ ದೊಡ್ಡ ಕೆರೆ
4. ಸಿಂಗನಮನೆ ಕರ್ಕಿ ಕೆರೆ

ಇವುಗಳ ಪೈಕಿ ದಾನವಾಡಿ ದ್ಯಾಮಣ್ಣನಕೆರೆ ಹಾಗೂ ಸಿಂಗನಮನೆ ಕುರ್ಕಿ ಕೆರೆಯ ಹೂಳೆತ್ತುವ ಕೆಲಸವನ್ನು ಕೈಗೆತ್ತಿಕೊಂಡಿದ್ದು ಹಾಗೂ ಸೈದರಕಲ್ಲಹಳ್ಳಿ ಕೆರೆ ಹೂಳೆತ್ತುವ ಕಾಮಗಾರಿಯು ಈ ಸಾಲಿನ ಆಯವ್ಯಯದಲ್ಲಿ 5.00 ಲಕ್ಷ ಅಂದಾಜಿನಲ್ಲಿ ಹಾಗೂ 1.50 ಲಕ್ಷ ರೂ. ಅನುದಾನದೊಡನೆ ಸೇರ್ಪಡೆಯಾಗಿದ್ದು, ಈ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು. ರಂಗೋರಹಳ್ಳ ಕೆರೆಯ ಹೂಳೆತ್ತುವ ಕಾಮಗಾರಿಗೆ ಪ್ರಸ್ತಾವನೆ ಇರುವುದಿಲ್ಲ.

ತುರುವೇಕೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಕೆರೆಗಳು ಹೊಡೆದಿರುವುದು

4487 - ಶ್ರೀ ಲಕ್ಷ್ಮಿನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ ಕೆರೆಗಳು ಹೊಡೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಟ್ಟು ಎಷ್ಟು ಕೆರೆಗಳು ಒಡೆದುಹೋಗಿವೆ? ಕೆರೆಗಳನ್ನು ಮತ್ತೆ ದುರಸ್ತಿ ಮಾಡಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ದುರಸ್ತಿ ಯಾವಾಗ ಮಾಡಲಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ಕಾರ್ಯವ್ಯಾಪ್ತಿಗೆ ಒಳಪಡುವ ಮೂರು ಕೆರೆಗಳು ಮಾತ್ರ ಇದ್ದು, ಅವುಗಳಲ್ಲಿ ಯಾವುದೂ ಒಡೆದಿರುವುದಿಲ್ಲ.

ಆ) ಮತ್ತು ಇ) ಮೇಲಿನ ಉತ್ತರದ ಹಿನ್ನಲೆಯಲ್ಲಿ ಉದ್ಭವಿಸುವುದಿಲ್ಲ.